

ಹೀಗಾಗಿಯೇ ಕಾರ್ಪೊರೇಟ್ ಕಂಪನಿಗಳು ತಮ್ಮ ನೌಕರರ ಮೇಲೆ ಸದಾ ಹದ್ದಿನ ಕಣ್ಣು ಇಡಲೆಂದು ಪತ್ತೆದಾರಿಗಳನ್ನು ನೆಚ್ಚಿಕೊಳ್ಳಲಾರಂಭಿಸಿದವು. ಇಂತಹ ದೊಡ್ಡ ಕಂಪನಿಗಳನ್ನು ಹಿಡಿದುಕೊಂಡರೆ ಪತ್ತೆದಾರಿ ಏಜೆನ್ಸಿಗಳಿಗೂ ಭರ್ತಿ ಕೆಲಸ. ಉತ್ತಮ ಆದಾಯ.

ಮಹೀಂದ್ರಾ ಎಸ್ಎಸ್‌ಜಿ 145 ಸದಸ್ಯರ ತನಿಖಾ ತಂಡವನ್ನೇ ಇಟ್ಟುಕೊಂಡಿತ್ತು. ಉನ್ನತ ಹುದ್ದೆಗಳಲ್ಲಿದ್ದ ಎಂಟ್ನೂರಬತ್ತು ಸಿಬ್ಬಂದಿಯನ್ನು ಪ್ರತಿ ತಿಂಗಳು ಅನುಮಾನದ ಹಿನ್ನೆಲೆಯಲ್ಲಿ ಪರಿಶೀಲನೆಗೆ ಒಳಪಡಿಸುತ್ತಿತ್ತು. ಪತ್ತೆದಾರಿಕೆ ಮೂಲಕ ಏನೆಲ್ಲ ಮಾಹಿತಿ ಸೋರಿಕೆಯಾಗುತ್ತಿದೆ ಎಂದು ಕಂಡುಕೊಳ್ಳುವ ಆಸಕ್ತಿಕರ ಕಾರ್ಯವದು. ಲಕ್ಷಾಂತರ ರೂಪಾಯಿ ಬೆಲೆಬಾಳುವ ಜೀವರಕ್ಷಕ ಚುಚ್ಚುಮದ್ದಿನ ತಯಾರಿಕಾ ವಿಧಾನದ ಗುಟ್ಟು ಬಹಿರಂಗಪಡಿಸಿದ ನಾಲ್ವರು ವೈದ್ಯರನ್ನು ಈ ಪತ್ತೆದಾರಿಕೆ ಬಯಲುಮಾಡಿತ್ತು.

ಕೆಪಿಎಂಜಿ, ಡೆಲಾಯಿಟ್ ಹಾಗೂ ಇ ಅಂಡ್ ವೈ ಎಂಬ ಕಂಪನಿಗಳು ಆಡಿಟಿಂಗ್ ದಿಗ್ಗಜಗಳಾಗಿ ಅಸ್ತಿತ್ವಕ್ಕೆ ಬಂದವು. ಅವು ವಿಧಿವಿಜ್ಞಾನ ಲೆಕ್ಕಿಗರನ್ನು (ಫೊರೆನ್ಸಿಕ್ ಅಕೌಂಟೆಂಟ್ಸ್), ಸೈಬರ್ ಫೊರೆನ್ಸಿಕ್ ಸ್ಪೆಷಲಿಸ್ಟ್‌ಗಳನ್ನು ನೇಮಕ ಮಾಡಿಕೊಂಡವು. ಸುಸಜ್ಜಿತವಾದ ವಿಧಿವಿಜ್ಞಾನ ಪರೀಕ್ಷಾ ತಂಡಗಳೇ ತಯಾರಾದವು. ನಿವೃತ್ತ ವಕೀಲರು, ಪತ್ರಕರ್ತರು ಕೂಡ ಆಗೀಗ ಇಂತಹ ಕಾರ್ಯಕ್ಕೆ ನೆರವಾದ ಉದಾಹರಣೆಗಳಿವೆ.

ವ್ಯಾವಹಾರಿಕ ವಂಚನೆಗಳ ಸ್ವರೂಪ ಸಂಕೀರ್ಣವಾಗುತ್ತಾ ಹೋದಂತೆ, ಅವುಗಳನ್ನು ಪತ್ತೆಹಚ್ಚುವ ಕುಶಲಕಾರರಿಗೂ ಬೇಡಿಕೆ ಕುದುರಿತು. ಅಲ್ಲದೆ ಅರ್ಥ ವ್ಯವಸ್ಥೆಯಲ್ಲಿನ ಅಪರಾಧಗಳ ಸ್ವರೂಪದಲ್ಲೂ ಕಂಡರಿಯದ ಬದಲಾವಣೆಗಳಾದವು. ಹೀಗೆ ಆದದ್ದೇ ಕೆಲವು ಖಾಸಗಿ ಪತ್ತೆದಾರಿ ಏಜೆಂಟರೂ ಪೊಲೀಸರ ವಿಚಾರಣೆಗೆ ಒಳಪಟ್ಟಿದ್ದುಂಟು. ಬಾಲಿವುಡ್ ನಟರದ್ದೂ ಸೇರಿ ಅನೇಕ ಪ್ರಮುಖರ ಮೊಬೈಲ್‌ನಿಂದ ಹೋದ ಹಾಗೂ ಸ್ವೀಕೃತವಾದ ಕರೆಗಳ ಪಟ್ಟಿಯನ್ನು ಮಾರಾಟ ಮಾಡಿದ ಕಾರಣಕ್ಕೆ ಈ ಹಿಂದೆ ಮುಂಬೈ ಪೊಲೀಸರು ಕೆಲವು ಪತ್ತೆದಾರರನ್ನು ಬಂಧಿಸಿದ್ದರು.

ಆಂಧ್ರಪ್ರದೇಶದಲ್ಲಿ ಲೇವಾದೇವಿ ವ್ಯವಹಾರ ಜೋರಾಗಿದೆ. ಹೀಗಾಗಿ ಅಲ್ಲಿ ವಂಚಕರನ್ನು ಪತ್ತೆಮಾಡಲು ಇಂತಹ ಪತ್ತೆದಾರಿ ಏಜೆಂಟರನ್ನು ನೇಮಿಸಿಕೊಳ್ಳುವ ಅಸಂಖ್ಯ ಜನರಿದ್ದಾರೆ. ಬಡ್ಡಿಗಾಗಿ ಯಾರಿಗೋ ಹಣ ಕೊಡುವ ಮೊದಲೇ ಅವನ ಜಾತಕ ಜಾಲಾಡುವ, ಕೊಟ್ಟ ನಂತರ ಆತನ ವಹಿವಾಟಿನ ಮೇಲೆ ನಿಗಾ ಇಡುವ, ಒಂದು ವೇಳೆ ವ್ಯವಹಾರದಲ್ಲಿ ಅವನು ವಿಪರೀತ ಮುಂದಡಿ ಇಟ್ಟರೆ 'ಬಾಲ ಕತ್ತರಿಸುವ' ದಾರಿಗಳನ್ನು ಹುಡುಕಲು ಪತ್ತೆದಾರಿ ಕಂಪನಿಗಳು ಬಳಕೆಯಾಗುತ್ತಿವೆ.

ಭಾರತದಲ್ಲಿ ಪತ್ತೆದಾರಿ ಕಂಪನಿಗಳನ್ನು ನಿಯಂತ್ರಿಸುವ ಯಾವ ವ್ಯವಸ್ಥೆಯೂ ಇಲ್ಲ. ಹೀಗಾಗಿ



## ಸಣ್ಣ ನಗರಗಳಲ್ಲೂ ಉಂಟೇ ಗ್ರಾಹಕರು?

ದಾವಣಗೆಯಲ್ಲಿ ಭದ್ರತಾ ಸಿಬ್ಬಂದಿಯನ್ನು ಒದಗಿಸುವ ಸಂಸ್ಥೆಯೊಂದು ಹೆಸರಿಗೆ ಮಾತ್ರ '... ಆ್ಯಂಡ್ ಡಿಟೆಕ್ಟಿವ್ ಏಜೆನ್ಸಿ' ಎಂದು ಹಾಕಿಕೊಂಡಿದೆ. ಇದುವರೆಗೆ ಯಾರೊಬ್ಬರೂ ಗ್ರಾಹಕರು ಪತ್ತೆದಾರಿಕೆ ಕೇಳಿಕೊಂಡು ಬಂದಿಲ್ಲ. ಮುಂದೆ ಬಂದರೆ ಬರಲಿ ಎನ್ನುವ ಕಾರಣಕ್ಕೆ ಹೀಗೆ ಹಾಕಿಕೊಂಡಿರುವುದಾಗಿ ಅದರ ಸಿಬ್ಬಂದಿ ರಮೇಶ ಎನ್ನುವವರು ಪ್ರತಿಕ್ರಿಯಿಸಿದರು.

ಪತ್ತೆದಾರಿ ಕೆಲಸ ಮಾಡಲು ನುರಿತರು ಇದ್ದಾರೆಯೇ ಎಂಬ ಪ್ರಶ್ನೆಗೆ ಅವರಲ್ಲಿ ಸ್ಪಷ್ಟ ಉತ್ತರ ಇರಲಿಲ್ಲ. 'ಅಂತಹ ಕೆಲಸ ಮಾಡುವ ಏಜೆನ್ಸಿಗಳ ನೆರವನ್ನು ಪಡೆಯಬಹುದಲ್ಲ' ಎಂದು ಅವರು ಉಪಗುತ್ತಿಗೆ ನೀಡುವ ಇರಾದೆಯನ್ನು ವ್ಯಕ್ತಪಡಿಸಿದರು.

ಆಕೃತಿ ಅವರಿಗೆ ಶಿವಮೊಗ್ಗದ ಗ್ರಾಹಕರೊಬ್ಬರು ಇತ್ತೀಚೆಗೆ ಸಿಕ್ಕಿದ್ದರಂತೆ. ವಿವಾಹ ವಿಚ್ಛೇದನ ಆದ ನಂತರ ಮಹಿಳೆಯರು ತಾನು ಯಾವುದೇ ಕೆಲಸದಲ್ಲಿ ಇಲ್ಲ ಎಂದು ನ್ಯಾಯಾಲಯದಲ್ಲಿ ಹೇಳಿ ಪ್ರತಿ ತಿಂಗಳು ಜೀವನಾಂಶ ಪಡೆಯುತ್ತಿದ್ದ ಪ್ರಕರಣವಿದು. ಪತ್ತೆದಾರಿ ಮಾಡಿದಾಗ ಅವರು ಸುಳ್ಳು ಹೇಳಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ.

### ಶುಲ್ಕವೆಷ್ಟು?

ಹೀಗೊಂದು ಪ್ರಶ್ನೆಯನ್ನು ನಾಲ್ಕೈದು ಜನ ಪತ್ತೆದಾರರನ್ನು ಕೇಳಿದಾಗ, ಸ್ಪಷ್ಟ ಉತ್ತರ ಬರಲಿಲ್ಲ. ಆಕೃತಿ ಖತ್ರಿ ಮಾತ್ರ ಇದಕ್ಕೆ ಜಾಹೀರಾತೊಂದನ್ನು ಉದಾಹರಣೆಯಾಗಿ ಉಲ್ಲೇಖಿಸಿದರು: 'ನೀವು ಬಿಸ್ಕತ್ತಿನ ಜಾಹೀರಾತು ನೋಡಿರಬಹುದು. ಮಳಿಗೆಗೆ ಹೋಗಿ ಒಬ್ಬರು ಬಿಸ್ಕತ್ ತೆಗೆದುಕೊಳ್ಳುತ್ತಾರೆ. ಕೊಡಲು ಹಣ ಇರುವುದಿಲ್ಲ. ಜೇಬನ್ನು ತಡಕಾಡುತ್ತಾರೆ. ಅವರ ನಿಸ್ತೇಜ ಮುಖ ನೋಡಿ ಮಳಿಗೆಯವರೇ – ಇರಲಿ, ತೆಗೆದುಕೊಳ್ಳಿ ಎನ್ನುತ್ತಾರೆ. ನಾನೂ ಅದೇ ರೀತಿ ವ್ಯವಹರಿಸುತ್ತೇನೆ. ಗ್ರಾಹಕರ ಧಾರಣಾಶಕ್ತಿ ಗಮನಿಸಿಯೇ ಶುಲ್ಕ ವಿಧಿಸುತ್ತೇವೆ. ಆಟೊ ಚಾಲಕನ ಪತ್ನಿಯೊಬ್ಬರು ನನ್ನನ್ನು ಹುಡುಕಿಕೊಂಡು ಬಂದು ತಮ್ಮ ಅನುಮಾನ ಬಗೆಹರಿಸಿಕೊಂಡರು. ಹಾಗಂತ ಪುಕ್ಕಟೆಯಾಗಿ ಕೆಲಸ ಮಾಡಿಕೊಡಲಾಗದು'.